

ತಿನ್ನುತ್ತಿದ್ದದ್ದು ಭಾಮಾನ ನೆನಪುಗಳ ಸಂದೂಕದಲ್ಲಿ ಜಾಗ ಗಿಟ್ಟಿಸಿಕೊಂಡಿವೆ. ಕಕ್ಕಸುಮನೆ ಅಂದರೆ ಮೇಲ್ಛಾವಣಿ ಇಲ್ಲದೆ ಸುತ್ತ ನಾಲ್ಕು ಗೋಡೆ, ಅದಕ್ಕೆ ತಗಡಿನ ಬಾಗಿಲು. ಅವಗಣಿಸಬಹುದಾದ ಒಂದು ಸ್ಥಳದ ಬಗ್ಗೆ ಇಷ್ಟೆಲ್ಲಾ ನೆನಪಿಸಿಕೊಳ್ಳಲು ಭಾಮಾನಿಗೆ ಸಕಾರಣ ಇದೆ. ಈ ಜಾಗವನ್ನು ಸುಲೋಚನಾ ತನ್ನ ಸರಸದಾಟಕ್ಕೆ ಆಯ್ಕೆ ಮಾಡಿಕೊಂಡಿದ್ದು ಅವಳ ಬುದ್ಧಿವಂತಿಕೆಯೋ ಅಥವಾ ಅವಳೊಡನೆ ಸಂಗ ಬೆಳೆಸಿದವನ ಜಾಣತನವೋ ಗೊತ್ತಿಲ್ಲ. ಹಾಗೆ ಅಷ್ಟೇನು ಜಾಣೆಯೇನಲ್ಲ ಸುಲೋಚನಾ. ತೆಗೆಯುತ್ತಿದ್ದ ಅಂಕಗಳ ಆಧಾರದ ಮೇಲೆ ಜಾಣತನವನ್ನು ಅಳೆಯುವುದು ಸೂಕ್ತವಲ್ಲ ಮತ್ತು ಗಮನ ಅನ್ನುವುದು ಬೇರೆಡೆಗೆ ಸೆಳೆಯಲ್ಪಟ್ಟಿದ್ದರಿಂದ ಅಂಕ ಗಳಿಕೆಯ ಸಾಮರ್ಥ್ಯ ಕಮ್ಮಿಯಾಗಿದ್ದಿರಲೂಬಹುದು. ಮಧ್ಯಾಹ್ನದ ಹೊತ್ತಲ್ಲಿ ಆ ಮನೆಯವರು ಕಕ್ಕಸಿನ ಕಡೆಗೆ ಸುಳಿಯುತ್ತಿರಲಿಲ್ಲ. ಅಜ್ಜಿಗೆ ಸ್ನಾನಾನಂತರ ಇಂತಹ ಸ್ಥಳಗಳಿಗೆ ಹೆಜ್ಜೆ ಇಡುವುದು ನಿಷಿದ್ಧ. ಅಪ್ಪ ತಾಲೂಕಾಫೀಸಿನ ನಿತ್ಯದ ದುಡಿಮೆಗೆ ಮತ್ತು ಅಮ್ಮ ತಲೆಯಡಿಗೆ ಒಂದು ಮಣೆ ಇಟ್ಟುಕೊಂಡು ಊಟದ ನಂತರದ ಚಿಕ್ಕದೊಂದು ಮಂಪರಿಗೆ. ಸುಲೋಚನನಿಗೆ ಸ್ಕೂಲು ಗೀಲು ಇರುತ್ತಿರಲಿಲ್ಲವೇ ಅಂದರೆ ರಜಾದಿನ ಮತ್ತು ಶನಿವಾರಗಳು ಅವಳದಾಗಿ ದಕ್ಕುತ್ತಿದ್ದುವು. ಅಪ್ಪ ಮನೆಯಲ್ಲಿಲ್ಲದಿದ್ದರೆ ಅವಳಿಗೆ ಹಬ್ಬ. ಕೆಲವೊಮ್ಮೆ ವಿನಾಕಾರಣ ರಜಾ ಹಾಕಿ ಮನೆಗೆ ಕಚ್ಚಿಕೊಂಡಿರುತ್ತಿದ್ದುದಿತ್ತು. ಅದಕ್ಕೆ ಕಾರಣ ತಿಳಿಯುವವರೆಗೆ ಭಾಮಾ ಯಾವಾಗೆಂದರೆ ಆವಾಗ ಸ್ಕೂಲು ತಪ್ಪಿಸುವ ಈ ಚಾಳಿಯನ್ನು ದೊಡ್ಡ ಸಂಗತಿಯಾಗಿ ಭಾವಿಸಿರಲಿಲ್ಲ. ಬಹುಶಃ ಮನೆಯವರೂ ಕಳ್ಳನೆಪಗಳ ಕುರಿತು ತಲೆ ಕೆಡಿಸಿಕೊಳ್ಳುತ್ತಿರಲಿಕ್ಕಿಲ್ಲ. ಅವನು ತರಕಾರಿ ಗಾಡಿ ತಳ್ಳಿಕೊಂಡು ಬೀದಿಯುದ್ದಕ್ಕೂ ಮಾರಾಟ ಮಾಡುತ್ತಿದ್ದ ಅನ್ಯಜಾತಿಯ ಯುವಕ. ಕಿರು ಓಣಿಯಲ್ಲಿದ್ದವರು ಅವನ ಕೂಗು ಕಿವಿದೆರೆಗೆ ಬೀಳುತ್ತಿದ್ದಂತೆ ಕೈಲೊಂದು ಮೊರವೋ, ಚೀಲವೋ ಹಿಡಿದು ವ್ಯಾಪಾರಕ್ಕೆ ಬರುತ್ತಿದ್ದರು. ಕೈ ಮುಷ್ಟಿಯಲ್ಲೊಂದು ನೋಟು. ಎಷ್ಟೇ ಬೆಲೆ ಹೇಳಿದರೂ ತಪ್ಪದೆ ನಡೆಯುತ್ತಿದ್ದ ಚೌಕಾಶಿ. ಭಾಮಾನಿಗೂ, ಅವನಿಗೂ ಅದು ಹೇಗೆ ಸಂಬಂಧ ಬೆಸೆಯಿತೋ ಪರಮಾತ್ಮ ಬಲ್ಲ. ಹೊಳೆದಂಡೆಯ ಮರಳಹಾಸಿಗೆ ಇಳಿಯುವ ಮೆಟ್ಟಿಲುಗಳ ಬಳಿ ಅವನ ಗಾಡಿ ತಂಗಿರುತ್ತಿತ್ತು, ಒಂದಿಷ್ಟು ವಿಶ್ರಾಂತಿಗೆಳಸಿದಂತೆ. ವ್ಯಾಪಾರ ಮಾಡುವವರು ಮಾಡಿಯಾಗಿರುತ್ತಿತ್ತು.